ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 22nd January 1970

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS

(to which oral answers were given)

Transfers and Retention of Officials in Medical Department

3. Sri S. H. PUTTARANGANATH (Belur).—

Will the Minister for Health be pleased to State :—

(*a*) the criteria for transfer and retention of officers and officials of Medical Department ;

(*b*) the authority exercising power of transferring and posting of the Medical Officers and Officials ?

Sri Y. RAMAKRISHNA (Minister for Health).—

(*a*) Transfers are made after a stay in the place of posting for at least 2 years and generally after 3 years.

(*b*) (i) Government in the case of Class I and Class II Officers.

(ii) Director of Health and Family Planning Services/Joint Directors/Administrative Officer in the case of Class III and Class IV Officials ;

(iii) Officers at District level in the case of 2nd Division Clerks and lower cadres within their jurisdictions.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಎರಡು ಮೂರು ವರ್ಷಗಳ ಕಾಲ ಒಂದೇ ಜಾಗದಲ್ಲಿದ್ದವರಿಗೆ ಕೂಡ ವರ್ಗ ಮಾಡುತ್ತಿದ್ದಾರೆ ಮತ್ತು ಕೆಲವು ಆಫೀಸರುಗಳನ್ನು ಒಂದೆರಡು ವರ್ಷಗಳಲ್ಲೇ ವರ್ಗ ಮಾಡುತ್ತಾರೆ. ಹೀಗೆ ಎರಡು ಮೂರು ಸಾರಿ ವರ್ಗ ಮಾಡಲು ಇವೆಂತಹ ಪ್ರಬಲ ಕಾರಣಗಳಾದರೂ ಏನು ?

† **Sri Y. RAMAKRISHNA.**—Transfers are made when both husband and wife serve in the department and when they are to be brought together ; (in the case of mutual consent) : on promotion to next cadre; selection to next higher education *i.e.*. if they are L. M. Ps and they want to go for M. B. B. S.; when posts have to be filled by specialists. I have to do that. Transfers are also made out of humanitarian considerations in the case of death or when a person is nearing retirement age or is in domestic troubles. Finally, transfers are effected if they are involved in local complaints.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್.—ಹತ್ತು ವರ್ಷಗಳ ಸರ್ವಿನ್ನು ಆಗಿರುವ ಅಧಿಕಾರಿಗಳನ್ನು ಎರಡು ಮೂರು ವರ್ಷಗಳಲ್ಲೇ ವರ್ಗ ಮಾಡುವ ನಿದರ್ಶನಗಳೂ ಇವೆ. ಹಿಂದೆ ಡೈರಕ್ಟರುಗಳೇ ವರ್ಗ ಮಾಡುವ ಅಧಿಕಾರ ಇತ್ತು ಈಗ ಬದಲಾವಣೆ ಮಾಡಿ ಸರಕಾರ ಮಾಡುತ್ತಿದೆ. ಇದನ್ನು ಪುನಃ ಬದಲಾವಣೆ ಮಾಡಿ ಡೈರಕ್ಟರವರ ಕಡೆಗೆ ಎಲ್ಲ ಅಧಿಕಾರಿಗಳನ್ನೂ ವರ್ಗ ಮಾಡುವಂತೆ ಏಕೆ ಮಾಡಬಾರದು ?

Sri Y. RAMAKRISHNA.—So far as Class I and II are concerned, the powers are retained with the Government. With regard to Class III and IV, the powers are delegated long back.

Sri SIDDIAH KASHIMATH.—Are there any complaints against transfers of these medical officers ?

Sri Y. RAMAKRISHNA.—Not many.

Sri K. M. THAMMIAH.—Under what circumstances these transfer were effected ?

Sri Y. RAMAKRISHNA.—I have already stated that.

ಶ್ರೀ ಪಾಟಾಳ್ ನಾಗರಾಜ್.—ವರ್ಗಾವಣೆ ಮಾಡುವಾಗ ಹಿಂದೆ ಇಲ್ಲಿದ್ದ ಒಬ್ಬ ಅಧಿಕಾರಿಗಳ ಮೇಲೆ ಬಹಳ ದೊಡ್ಡ ಆರೋಪಗಳು ಇಲ್ಲಿ ಬಂದಮೇಲೆ ಈ ಅಧಿಕಾರವನ್ನು ಅವರ ಕೈ ತಪ್ಪಿಸಿ ಮಾನ್ಯ ಮಂತ್ರಿಗಳೇ ವರ್ಗ ಮಾಡುವ ಅಧಿಕಾರವನ್ನು ಇಟ್ಟುಕೊಂಡರು. ಆದರೆ ಈಗ ವರ್ಗಾವಣೆಗಳು ಆಗುವುದು ಮಾನ್ಯ ಮಂತ್ರಿಗಳು ಇಲ್ಲಿ ಕೊಟ್ಟ ಕಾರಣಗಳಲ್ಲದೇ ಮೂರು ನಾಲ್ಕು ಏಜೆಂಟರುಗಳ ಪ್ರಭಾವಕ್ಕೆ ಒಳಗಾಗಿ ವರ್ಗಾವಣೆಗಳನ್ನು ಮಾಡುತ್ತಾರೆ ಎಂದು ನನಗೆ ತಿಳಿದುಬಂದಿದೆ ಮತ್ತು ಇದರಲ್ಲಿ ಲಂಚಾವತಾರವೂ ಆಗುತ್ತಿದೆ ಎಂದು ಕೇಳಿ ಬರುತ್ತಿದೆ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ ? ಇದು ನಿಜವೇ ?

ಶ್ರೀ ವೈ. ರಾಮಕೃಷ್ಣ.—ಇದರಲ್ಲಿ ನೂರಕ್ಕೆ ನೂರರಷ್ಟು ನಿಜಾಂಶ ಇಲ್ಲ. ಇಂತಹ ವಿಚಾರಗಳು ಯಾವುದಾದರೂ ಇದೆ ಎಂದು ಮಾನ್ಯ ಸದಸ್ಯರು ಈಗಲೇ ನನ್ನ ಗಮನಕ್ಕೆ ತಂದರೆ ಈ ಕೂಡಲೆ ವಿಚಾರಣೆ ಮಾಡಿ ಅವರಿಗೆ ತಿಳಿಸಲು ತಯಾರಾಗಿದ್ದೇನೆ.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ಮೊದಲನೇ ಹಾಗೂ ಎರಡನೇ ವರ್ಗದ ಅಧಿಕಾರಿಗಳನ್ನು ವರ್ಗ ಮಾಡುವ ಅಧಿಕಾರ ಮೊದಲು ಡೈರೆಕ್ಟರ್‌ರವರಿಗೆ ಇದ್ದದನ್ನು ಸರಕಾರ ವಹಿಸಿಕೊಂಡಿತ್ತು. ಈಚೆಗೆ ಬಂದಿರುವ ಡೈರೆಕ್ಟರು ಸರಿಯಾಗಿರುವುದರಿಂದ ಪುನಃ ಈ ವರ್ಗದ ಅಧಿಕಾರಗಳನ್ನು ಇವರಿಗೆ ಏಕೆ ವರ್ಗ ಮಾಡಬಾರದು ?

ಶ್ರೀ ವೈ. ರಾಮಕೃಷ್ಣ.—ನಾನಾಗಲೇ ತಿಳಿಸಿದಂತೆ ಕ್ಲಾಸು 1 ಮತ್ತು 2 ನೇ ದರ್ಜೆ ಅಧಿಕಾರಿಗಳ ವರ್ಗಾವಣೆಯನ್ನು ಸರಕಾರವೇ ವಹಿಸಿಕೆ ಂಡಿದೆ. ಡೈರೆಕ್ಟರಿಗೆ ಮೂರನೇ ಹಾಗೂ ನಾಲ್ಕನೇ ವರ್ಗದ ವರ್ಗಾವಣೆಗಳನ್ನು ವಹಿಸಿಕೊಡಲಾಗಿದೆ.

ಶ್ರೀ ಜಿ. ರಾಮೇಗೌಡ.—ವರ್ಗಾವಣೆ ಮಾಡುವಾಗ ಕೆಲವು ಕಾರಣಗಳನ್ನು ಮಾನ್ಯ ಮಂತ್ರಿಗಳು ಕೊಟ್ಟರು. ಆದರೆ ಕೆಲವರ ಪ್ರಭಾವಕ್ಕೊಳಗಾಗಿ ಎರಡು ಮೂರು ವರ್ಷಗಳಿಂದ ವರ್ಗವಾಗದೆ ಐದಾರು ವರ್ಷಗಳಿಂದಲೂ ಒಂದೇ ಸ್ಥಳದಲ್ಲಿರುವವರು ಇಲ್ಲವೇನು ?

---

† Asterisks indicate that remarks or speeches have not been revised by the member concerned.

ಶ್ರೀ ವೈ. ರಾಮಕೃಷ್ಣ.—ಒಂದು ಕೇಸು ಇದೆ. ಇದಕ್ಕೆ ಕಾರಣ ನಮ್ಮ ಬೌರಿಂಗು ಆಸ್ಪತ್ರೆಯಲ್ಲಿ ಒಬ್ಬರು Anaesthesist ಬೇಕಾಗಿತ್ತು. ಇವರನ್ನು ಇಟ್ಟುಕೊಂಡು ಒಂದು ತಿಂಗಳ ಕ ಟ್ರೈನಿಂಗು ಕೊಡಬೇಕೆಂದು ಮಾಡಲಾಗಿತ್ತು. ಆದರೆ ಅವರು ಕಾಯಿಲೆಗೆ ಒಳಗಾಗಿದ್ದುದ ರಿಂದ ಅವರನ್ನು ವಾಪಸ್ಸು ಕಳುಹಿಸಿರುವ ಒಂದು ಪ್ರಸಂಗ ಇದೆ.

ಶ್ರೀ ಎಂ. ನಾಗಪ್ಪ.—ಮೊದಲನೇ ಹಾಗೂ ಎರಡನೇ ವರ್ಗದ ಅಧಿಕಾರಿಗಳನ್ನು ವರ್ಗ ಮಾಡುವಾಗ ಮೊದಲಿಗೆ ಡೈರೆಕ್ಟರ ಕಡೆಗೇ ಇತ್ತು. ಆದರೆ ಈಗ ಒಂದೂವರೆ ವರ್ಷಗಳಿಂದೀಚೆಗೆ ಇದನ್ನು ಮಾರ್ಪಾಡು ಮಾಡಿ ಪುನಃ ಸರಕಾರವೇ ವರ್ಗ ಮಾಡಬೇಕೆಂದು ಇದೆ. ಈಗ ಸರಕಾರ ಇದನ್ನು ಡೈರೆಕ್ಟರ ಕಡೆಗೇ ಕೊಡುವುದರ ಬಗ್ಗೆ ಯೋಚನೆ ಮಾಡುತ್ತಾರೆಯೇ ?

ಶ್ರೀ ವೈ. ರಾಮಕೃಷ್ಣ.—ಹಿಂದಿನಿಂದಲೂ ಸರಕಾರ ಮಾಡುತ್ತಿತ್ತು. ಈಗಲೂ ಅದರಂತೆ ಮಾಡುತ್ತಿದ್ದಾರೆ. ಬೇರೆ ಇತರ ಅಧಿಕಾರಿಗಳನ್ನು ವರ್ಗ ಮಾಡುವ ಅಧಿಕಾರವನ್ನು ಡೈರೆಕ್ಟರ ಕಡೆಗೇ ಕೊಡಲಾಗಿದೆ. ಹಿಂದೆ ಇಲ್ಲಿನ ಮಾನ್ಯ ಸದಸ್ಯರು ಡೈರೆಕ್ಟರಲ್ಲಿನ ಅಧಿಕಾರವನ್ನು ಸರಕಾರ ತೆಗೆದುಕೊಳ್ಳಬೇಕೆಂದು ಸೂಚನೆಗಳು ಬಂದುದರಿಂದ ಅದರಂತೆ ಮಾಡಲಾಗಿದೆ.

Mr. DEPUTY SPEAKER.—Question No. 8 by Sri S. Bangarappa Hon. Member is absent. Next question No. 14.

ಶ್ರೀ ಬಿ. ಪಿ. ಗಂಗಾಧರ್.—ನನ್ನ ಈ ಪ್ರಶ್ನೆಯನ್ನು ಕೇಳಲು ತಾವು ಅವಕಾಶ ಕೊಡ ಬೇಕು. ಒಂದು ವರ್ಷದಿಂದಲೂ ನಮ್ಮ ಊರಿನಲ್ಲಿ ಒಬ್ಬರು ಡಾಕ್ಟರನ್ನು ನೇಮಿಸಿಲ್ಲ. ಇದು ಬಹಳ ಜರೂರು ವಿಷಯ ಇದರ ಬಗ್ಗೆ ತಾವು ಪ್ರಶ್ನೆ ಕೇಳಲು ಅವಕಾಶ ಕೊಡಬೇಕು.

ಉಪಾಧ್ಯಕ್ಷರು.—ನಾನು ಬೇರೆ ಪ್ರಶ್ನೆಯನ್ನು ಕರೆದಿರುವುದರಿಂದ ಈಗ ಈ ಪ್ರಶ್ನೆಯನ್ನು ಕೇಳಲು ಅವಕಾಶ ಇಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಪಿ. ಗಂಗಾಧರ್.—ಒಬ್ಬರು ಡಾಕ್ಟರನ್ನು ಅಲ್ಲಿಗೆ ಕಳಿಸಿಕೊಡುತ್ತೇನೆಂದು ಹೇಳಲಿ, ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಈಗ ನಾನು ಸಿದ್ದವೀರಪ್ಪನವರನ್ನು ಪ್ರಶ್ನೆ ಕೇಳಲು ಕರೆದಿದ್ದೇನೆ, ತಾವು ಕುಳಿತುಕೊಳ್ಳಿ.

ಶ್ರೀ ಬಿ. ದೊಡ್ಡಬೋರೇ ಗೌಡ.—ಸ್ವಾಮಿ, ನನಗೆ ಅವಕಾಶ ಕೊಡುತ್ತೇನೆಂದು ಹೇಳಿ ಈಗ ಬೇರೆ ಪ್ರಶ್ನೆಯನ್ನು ತೆಗೆದುಕೊಂಡಿದ್ದೀರಿ. ಈ ರೀತಿ ತಾವು ಟ್ರೀಟ್ ಮಾಡುವುದಾದರೆ ನಮ್ಮ ಮನಸ್ಸಿಗೆ ನೋವಾಗುತ್ತದೆ. ಜನರ ಕುಂದುಕೊರತೆಗಳನ್ನು ಸರ್ಕಾರಕ್ಕೆ ತಿಳಿಸಲು ನಾವು ಇಲ್ಲಿಗೆ ಬಂದಿರುವುದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಆಸ್ಪತ್ರೆ ಇದ್ದಮೇಲೆ ಡಾಕ್ಟರನ್ನು ನೇಮಕ ಮಾಡಬೇಕು.

ಶ್ರೀ ಬಿ. ಪಿ. ಗಂಗಾಧರ್.—ಡಾಕ್ಟರನ್ನು ನೇಮಕ ಮಾಡಲಿ, ಇಲ್ಲದಿದ್ದರೆ ಆಸ್ಪತ್ರೆಯನ್ನು ತೆಗದುಬಿಡಲಿ.

ಶ್ರೀ ಎಚ್. ಸಿದ್ದವೀರಪ್ಪ.—ಇಷ್ಟೆಲ್ಲಾ ಗಲಾಟೆ ಏತಕ್ಕೆ, ಹೌದು ಅಥವಾ ಇಲ್ಲ ಎಂದು ಹೇಳಿ ಬಿಟ್ಟರೆ ಆಯಿತು.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ರೂಲ್ಸ್ ಮತ್ತು ಪ್ರೊಸೀಜರ್ ಗೊತ್ತಿದೆ. ಅಧ್ಯಕ್ಷರು ಪ್ರಶ್ನೆಯನ್ನು ಅಡ್ಮಿಟ್ ಮಾಡಿದರೆ ನಾವು ಉತ್ತರ ಕೊಡಬಹುದು, ಇಲ್ಲದಿದ್ದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ನೆನ್ನೆದಿವಸ ಅಧ್ಯಕ್ಷರು ತಮಗೆ ಉತ್ತರ ಕೊಡುವುದು ಬೇಡ ಎಂದು ಒಂದು ಸಂದರ್ಭದಲ್ಲಿ ಹೇಳಿದಾಗ ನಿಮ್ಮ ಅನುಕೂಲಕ್ಕಾಗಿ ಉತ್ತರ ಕೊಟ್ಟಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರು ಈಗ ಪರ್ಮಿಟ್ ಮಾಡದೇ ಇರುವುದರಿಂದ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ಡಾಕ್ಟರನ್ನು ಅಲ್ಲಿಗೆ ಪೋಸ್ಟ್ ಮಾಡುತ್ತಾರೆಯೇ ಇಲ್ಲವೆ, ಎಂಬುದನ್ನು ಸರ್ಕಾರದವರು ಈಗ ಹೇಳಲೇಬೇಕು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಬೇಕಾದರೆ ಅರ್ಧಗಂಟೆ ಚರ್ಚೆಗೆ ಬರೆದು ಕಳುಹಿಸಲೀ ನಾನು ಅದನ್ನು ಪರ್ಯಾಲೋಚನೆ ಮಾಡುತ್ತೇನೆ.

Sri H. M. CHANNABASAPPA.—With your permission, I would like to make one submission. After all, we are here to settle matters of dispute in the larger interests of the country. When it suits the Chief Minister he will rise and make a statement; whenever it does not suit him, he will keep quiet. After all, this is a very small matter and nothing prevents him from making a statement and I am sure you will be the last person to say: "I do not permit you to make the statement" when he wants to make a statement. I am sure you will permit him to make the statement. So instead of making the statement, if he only sticks to the rule not to make the statement, I will have 100 occasions when I will point out that he is breaking the rule.

Sri VEERENDRA PATIL.—I am really surprised at the remarks made by the hon. Member Sri Channabasappa. It is not a question of suiting anybody's convenience. When the Speaker has given a ruling that he is not going to permit that question when he has called the next question and when the Speaker is telling the member that he is not going to permit him to put the question is it fair on my part to rise and say that I am going to reply to that question? I do not think I should resort to that.

ಶ್ರೀ ಬಿ. ಪಿ. ಗಂಗಾಧರ್.—ಇಂತಹ ಇನ್ ಜೆನ್ಯುಸ್ ಹಿಂದೆ ಬಹಳ ನಡೆದಿವೆ. ಬೇಕಾದರೆ ಪ್ರೊಸೀಡಿಂಗ್ಸ್‌ನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಈ ರೀತಿಯ ಡಿಸ್‌ಕ್ರಿಮಿನೇಷನ್ ಪತಕ್ಕೆ ಮಾಡಬೇಕು ಎಂದು ಕೇಳುತ್ತೇನೆ.

Devarabilikere Project

14. Sri H. SIDDAVEERAPPA (Harihar).—

Will the Chief Minister be pleased to state :—

the resources, if any, found out to implement Devarabilikere Project as promised in the last Budget Session?

Sri VEERENDRA PATIL (Chief Minister). —

This project is proposed to be taken up for execution soon. It forms a component part of Bhadra Project Estimate. Funds allotted for Bhadra Project in budget estimates will be utilised as and when required.

Sri H. SIDDAVEERAPPA.—Is it not a fact that this project was separately included as one of the projects that will have to be taken as a separate project and allotted funds as per the discussion in the Resources Committee?

† Sri VEERENDRA PATIL.—This is part of Bhadra Project. This is going to cover the command area of Bhadra Project. When Bhadra Project was conceived this was also included in it. There were so many investigations going on and Government ultimately decided and accordingly estimates have been revised. Government have recently